O.S 522/2013

Pw1

ದಿನಾಂಕ 21.02.2024 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಒ.ಮ್.ಜಿ ವಕೀಲರಿಂದಃ**

ನಾನು ಡಿಪ್ಲೊಮ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೇಬಲ್ ನೆಟ್ ವರ್ಕ್ ಕೆಲಸ ಮಾಡುತ್ತೇನೆ. ನಾನು ಮತ್ತಿಕೆರೆಯಲ್ಲಿ ಖಾಯಂ ವಾಸಿಯಾಗಿರುತ್ತೇನೆ. ದಾವಾ ಆಸ್ತಿಗೂ ಮತ್ತು ನನ್ನ ನಿವಾಸಕ್ಕೂ 20 ಕಿ,ಮೀ ಅಂತರವಿದೆ. ದಾವಾ ಆಸ್ತಿಯನ್ನು ನಾನು ಖರೀದಿಸುವ ಮುಂಚೆ ನಾನು ಸರ್ವೆ ಮಾಡಿಸಿರುವುದಿಲ್ಲ. ಕ್ರಯ ಪತ್ರ ಆದ 2, 3 ವರ್ಷದ ನಂತರ ನಾನು ಸರ್ವೆ ಮಾಡಿಸಿರುತ್ತೇನೆ, ಮುಂದುವರೆದು ಪೋಡಿ ಮಾಡುವಾಗ ಮಾಡಿಸಿರುತ್ತೇನೆ. ಪೋಡಿ ಆಗದೆ ಇದ್ದ ಕಾರಣ ದಾವಾ ಆಸ್ತಿಯ ಕ್ರಯ ಆಗುವ ಸಮಯದಲ್ಲಿ ಪೋಡಿ ಕಲ್ಲು ಇರಲಿಲ್ಲ ಎಂದರೆ ಸರಿ. ಕ್ರಯವಾಗುವಾಗ ದಾವಾ ಆಸ್ತಿ ಎಲ್ಲಿ ಬರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ 23 ಗುಂಟೆ ಎಂದು ಬರೆದಿದೆ ಆದರೆ ನಿಪಿ-3 ರಲ್ಲಿ 21 ಗುಂಟೆ ಎಂದು ಬರೆದಿದೆ ಎಂದರೆ ಸರಿ.

ಸರ್ವೆ ನಂ.119/2 ರಲ್ಲಿ ನನಗೆ ಎಷ್ಟು ಆಸ್ತಿ ಬರಬೇಕು ಎಂದರೆ 23 ಗುಂಟೆ. ಸರ್ವೆ ನಂ.119/2 ರಲ್ಲಿ 12 ವರೆ ಗುಂಟೆ ಕರಾಬು ಯಾವ ರೀತಿಯಲ್ಲಿ ಇತ್ತು ಎಂದರೆ ಮೊದಲಿಗೆ ಹಳ್ಳ ಇತ್ತು ಈಗ ಇರುವುದಿಲ್ಲ. ಸರ್ವೆ ನಂ.120/2 ರಲ್ಲಿ 12 ಗುಂಟೆ ಕರಾಬು ಯಾವ ರೀತಿಯಲ್ಲಿ ಇತ್ತು ಎಂದರೆ ಮೊದಲಿಗೆ ಹಳ್ಳ ಇತ್ತು ಈಗ ಇರುವುದಿಲ್ಲ. 1 ನೇ ಪ್ರತಿವಾದಿಗೆ ಸರ್ವೆ ನಂ.119/1 ರಲ್ಲಿ 8 ಗುಂಟೆ ಜಮೀನು ಇದೆ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನ್ನ ಜಮೀನು ಒತ್ತುವರಿ ಮಾಡಿ ದೇವಸ್ಥಾನ ಕಟ್ಟುತ್ತಿದ್ದರು ಆದ್ದರಿಂದ ನಾನು ದೂರನ್ನು ಕೊಟ್ಟು ದಾವೆಯನ್ನು ಹಾಕಿರುತ್ತಾರೆ. ಸರ್ವೆ ನಂ. 120/1 ರಲ್ಲಿ 1 ನೇ ಪ್ರತಿವಾದಿಗೆ 12 ಗುಂಟೆ ಜಮೀನು ಇದೆ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಸರ್ವೆ ನಂ.119/1 ರಲ್ಲಿ 11 ಗುಂಟೆ ಜಮೀನು ಇದೆ ಮತ್ತು ಸರ್ವೆ

ನಂ.120/1 ರಲ್ಲಿ 8 ಗುಂಟೆ ಜಮೀನು ಇದೆ ಎಂದು ನಿಪಿ-17 ಮತ್ತು 18 ರಲ್ಲಿ ಬರೆದಿದೆ ಎಂದರೆ ನಾನು ನೋಡಿಲ್ಲ, ಮುಂದುವರೆದು ನನ್ನ ಜಮೀನು ಒತ್ತುವರಿ ಮಾಡಿದ ಕಾರಣ ದಾವೆಯನ್ನು ಹಾಕಿರುತ್ತೇನೆ.

2 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ 11 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಹಾಗೂ 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ಒತ್ತುವರಿ ಮಾಡಿರುತ್ತಾರೆ. ಒತ್ತುವರಿ ಮಾಡಿರುವ ಬಗ್ಗೆ ಸರ್ವೆ ನಕ್ಷೆಯನ್ನು ನಾನು ಹಾಜರು ಪಡಿಸಿರುತ್ತೇನೆ. ನಾನು ನನ್ನ ದಾವೆಯಲ್ಲಿ ಒತ್ತುವರಿಯನ್ನು ತೆರವುಗೊಳಿಸಿ ಸ್ವಾಧೀನವನ್ನು ನೀಡಬೇಕೆಂದು ಪ್ರಾರ್ಥನೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವಾಗ ಪ್ರತಿವಾದಿಗಳು ಒತ್ತುವರಿ ಮಾಡಿದ್ದರು, ಮುಂದುವರೆದು ದೇವಸ್ಥಾನವನ್ನು ಬೇರೆಯವರಿಂದ ಕಟ್ಟಿಸುತ್ತಿದ್ದರು ಅದನ್ನು ತೆರವುಗೊಳಿಸಿ ನಾನು ಈ ದಾವೆಯನ್ನು ಹಾಕಿರುತ್ತೇನೆ. ನನ್ನ ಪ್ರಕಾರ ಈ ದಾವೆಯಲ್ಲಿ ನಾನು ಒತ್ತುವರಿ ಆಗಿರುವ ಜಾಗವನ್ನ ತೆರವುಗೊಳಿಸುವಂತೆ ಕೇಳಿರುತ್ತೇನೆ ಎಂದರೆ ಸರಿ. ಸರ್ವೆ ಮಾಡಿಸಿ ಯಾರು ಎಷ್ಟು ಸ್ವಾಧೀನದಲ್ಲಿ ಇದ್ದಾರೆ ಎಂದು ತಿಳಿದುಕೊಳ್ಳಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

1 ನೇ ಪ್ರತಿವಾದಿ ನನಗೆ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ದಾವಾ ಸಮಯದಲ್ಲಿ ಕೊಟ್ಟಿದ್ದರು. 1 ನೇ ಪ್ರತಿವಾದಿಗೆ ನಾನು ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

*2* ನೇ ಪ್ರತಿವಾದಿ ಹಾಗೂ ಅವರ ವಕೀಲರು ಗೈರು ಹಾಜರಿದ್ದ ಕಾರಣ *2* ನೇ ಪ್ರತಿವಾದಿಯ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

ಸಿ/ಸಿ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ

**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**